# IN THE COURT OF THE PRL. DISTRICT AND SESSIONS JUDGE, BAGALKOTE

SC. No. 80/2023

| | | |
|---|---|---|
| Name | : | Dr.Narayan |
| Father's name | : | Muniswami |
| Age | : | 55 years |
| Occupation | : | General Surgeon, Kerudi Hospital and Research Center, Bagalkot. |
| Resident of | : | Bagalkot |

Witness duly sworn on 12.11.2025

## Examination-in-Chief by learned Public Prosecutor

From passed 26 years I am working as General Surgeon at Kerudi Hospital and Research Center, Bagalkot.

2. On 09.08.2023 at about 1-25 p.m a person by name Bayavva Mallappa Meti aged about 55 years was brought by her son Basappa Meti to our hospital with the history of found unconscious with injury to scalp 7x6 cms in the field at about 12-00 p.m at Sindagi. On examination I noticed that the injured had sustained lacerated injury to her forehead and right parietal area, lacerated injury to her tongue.

3. We tried to review the patient by incubation and CPR, but we could not review the patient. Hence the patient was declared as dead at 1-55 p.m.

Subsequently, we have sent police intimation reporting the death of deceased Bayavva Mallappa Meti. I have brought the entire medical records of the deceased to the court. The same is marked as Ex.P-26.

It is true that if a person is assaulted with a rod now shown to me before the court, the injury noted in Ex.P-26 is likely to occur. The rod is marked as MO-7.

**Cross-examination by counsel for the accused**

It is true that in the entire medical record/Ex.P-26 my name is not forthcoming. Witness voluntarily states that we work as a team in Kerudi hospital. It is false to state that if a person falls on sharp edged stones, the injury noted in Ex.P-26 is likely to occur. It is true that when the patient was brought to the hospital by her son Basappa Meti he did not disclose any history of assault. It is true that for the first time I am seeing MO-7/rod before the court. It is true that the I.O has not obtained my opinion as to the injury noted in Ex.P-26 is likely to occur, if a person assaulted with MO-7. It is false to state that that I have issued the Ex.P-26 at the instance of police officials.

Re-examination: Nil.
(Typed to my dictation in open court on computer)

R O & A C

Prl. Dist. & Sessions Judge, Bagalkote.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 80/2023**

| | | |
|---|---|---|
| ಹೆಸರು | : ಶ್ರೀಕಾಂತ ಮೇಟಿ | ಫ್ರಾಸಾ-16 |
| ತಂದೆಯ ಹೆಸರು | : ರಮೇಶ | ಚಾಸಾ-19 |
| ವರ್ಷ | : 26 ವರ್ಷ | |
| ಉದ್ಯೋಗ | : ಒಕ್ಕಲುತನ | |
| ವಿಳಾಸ | : ಸಿಂದಗಿ | |

ದಿಃ 12.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-1/ಬಸಪ್ಪ, ಚಾಸಾ-8/ಬಸವರಾಜ, ನ್ಯಾಯಾಲಯದ ಮುಂದಿರುವ ಆರೋಪಿತಳು, ಮೃತ ಶಾವಕ್ಕ, ಚಾಸಾ-9/ಮಲ್ಲಪ್ಪ, ಚಾಸಾ-10/ಯಂಕಪ್ಪ ನನಗೆ ಗೊತ್ತು, ಅವರು ನಮ್ಮ ಸಂಬಂಧಿಕರು. ನನ್ನ ಹತ್ತಿರ ಬಲೆರೋ ವಾಹನ ಕೆಎ-05/ಎಂಇ-9011 ಇದ್ದು, ಅದನ್ನು ನಾವು ನಮ್ಮ ಹೊಲಮನಿ ಕೆಲಸಕ್ಕೆ ಉಪಯೋಗಿಸುತ್ತೇವೆ ಹಾಗೂ ಸದರಿ ವಾಹನವನ್ನು ನಾನು ಮತ್ತು ಚಾಸಾ-8 ರವರು ನಡೆಸುತ್ತೇವೆ.

2. ಈಗ ಅಂದಾಜು 2 ವರ್ಷಗಳ ಹಿಂದೆ ನನ್ನ ವಾಹನವನ್ನು ಚಾಸಾ-8/ಬಸವರಾಜ ರವರು ತೆಗೆದುಕೊಂಡು ಗಾಯಾಳು ಬಾಯವ್ವಳನ್ನು ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿ ಉಪಚಾರ ಕೊಡಿಸಿರುತ್ತಾರೆ. ನಂತರ ಆಸ್ಪತ್ರೆಯಲ್ಲಿ ಬಾಯವ್ವ ರವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ

ಬಲೆರೊ ವಾಹನ ಸಂ. ಕೆಎ-05/ಎಂಇ-9011 ನನ್ನ ಹೆಸರಿನಲ್ಲಿರುತ್ತದೆ. ಸದರಿ ವಾಹನದ ಕೀ ಯಾವಾಗಲೂ ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿದ್ದ ವಾಹನವನ್ನು ಚಾಸಾ-8 ರವರು ತೆಗೆದುಕೊಂಡು ಹೋಗುವ ಮುನ್ನ ನನಗೆ ತಿಳಿಸಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 80/2023**

| | | | |
|---|---|---|---|
| ಹೆಸರು | : | ಭೀಮಪ್ಪ ಕೊಂತಿಕಲ್ಲ | ಫ್ರಾಸಾ-15 |
| ತಂದೆಯ ಹೆಸರು | : | ಮಹಾದೇವಪ್ಪ | ಚಾಸಾ-16 |
| ವರ್ಷ | : | 55 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಟಕ್ಕಳಕಿ | |

ದಿಃ 12.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-1 ಬಸಪ್ಪ ನನ್ನ ಅಳಿಯ. ಚಾಸಾ-9/ಮಲ್ಲಪ್ಪ, ಚಾಸಾ-10/ಯಂಕಪ್ಪ ಹಾಗೂ ನ್ಯಾಯಾಲಯದ ಮುಂದಿರುವ ಆರೋಪಿ/ಶಾವಕ್ಕ ಮತ್ತು ಮೃತ ಬಾಯಕ್ಕ ನನಗೆ ಗೊತ್ತು. ಅವರು ನಮ್ಮ ಸಂಬಂಧಿಕರು. ಚಾಸಾ-17/ಅನ್ನಪೂರ್ಣ ನನ್ನ ಹೆಂಡತಿ.

2. ಆರೋಪಿ/ಶಾವಕ್ಕ ಮತ್ತು ಮೃತ ಬಾಯಕ್ಕ ಅಕ್ಕ-ತಂಗಿಯರು ಮತ್ತು ಅವರು ಅಕ್ಕಪಕ್ಕದ ಮನೆಯಲ್ಲಿ ವಾಸವಾಗಿದ್ದರು. ನನ್ನ ಮಗಳು/ಲಕ್ಷ್ಮೀ ರವರನ್ನು ಚಾಸಾ-1 ರವರಿಗೆ ಕೊಟ್ಟು ಮದುವೆ ಮಾಡಬೇಕು ಎಂದು ನಿಶ್ಚಯ ಆಗಿತ್ತು. ಈ ವಿಚಾರ ಬಿಟ್ಟರೆ ಆರೋಪಿ ಶಾವಕ್ಕ ಮತ್ತು ಮೃತ ಬಾಯಕ್ಕ ರವರ ನಡುವೆ ಸಂಬಂಧ ಹೇಗೆ ಇತ್ತು ಎಂದು ನನಗೆ ಗೊತ್ತಿಲ್ಲ. ಬಾಯಕ್ಕ ಹೇಗೆ ಮೃತಪಟ್ಟಿರುತ್ತಾಳೆ ಮತ್ತು ಆಕೆ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ನನ್ನ ಮಗಳು ಲಕ್ಷ್ಮೀ ರವರನ್ನು ಚಾಸಾ-1 ರವರಿಗೆ ಕೊಟ್ಟು ಮದುವೆ ಮಾಡುವದು ಮೃತ ಬಾಯಕ್ಕಳಿಗೆ ಇಷ್ಟ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಕಾರಣದಿಂದ ನ್ಯಾಯಾಲಯದ ಮುಂದಿರುವ ಆರೋಪಿ/ಶಾವಕ್ಕ ರವರಿಗೂ ಮತ್ತು ಬಾಯವ್ವಳಿಗೆ ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ.

2. ದಿಃ 09.08.2023 ರಂದು ನಾನು ಮನೆಯಲ್ಲಿದ್ದಾಗ ಬಾಯಕ್ಕ ಮಧ್ಯಾಹ್ನ 12 ಗಂಟೆಗೆ ತಮ್ಮ ಮನೆ ಮುಂದೆ ಬಟ್ಟೆ ತೊಳೆಯುವಾಗ ಬಿದ್ದು, ತಲೆಗೆ ಭಾರಿ ಪೆಟ್ಟಾಗಿ ಬಾಗಲಕೋಟೆ ಕೆರೂಡಿ ಆಸ್ಪತ್ರೆಯಲ್ಲಿ ದಾಖಲಾಗಿ, ಮರಣ ಹೊಂದಿರುತ್ತಾಳೆ ಎಂದು ವಿಷಯ ತಿಳಿದು, ನಾನು ಕೆರೂಡಿ ಆಸ್ಪತ್ರೆಗೆ ಹೋಗಿ ಶವ ನೋಡಿರುತ್ತೇನೆ ಎಂದರೆ ಸರಿಯಲ್ಲ. ಬಾಯಕ್ಕಳಿಗೆ ತಲೆ ಮೇಲೆ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ.

3. ನಂತರ ಚಾಸಾ-1 ರವರು ಆತನ ತಾಯಿ ಸಾವಿನ ಬಗ್ಗೆ ತನಿಖೆ ನಡೆಯಬೇಕು ಎಂದು ಬಾಗಲಕೋಟೆ ಗ್ರಾಮೀಣ ಪೊಲೀಸ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದನು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ದೂರು ನೀಡಿದ ನಂತರ ಪೊಲೀಸರು ಎಲ್ಲಾ ವಿಷಯ ತೆಗೆಯುತ್ತಾರೆ ಎಂದು ಆರೋಪಿ/ಶಾವಕ್ಕ ತಪ್ಪನ್ನು ಒಪ್ಪಿಕೊಂಡು ದಿಃ 09.08.2023 ರಂದು ಬೆಳಿಗ್ಗೆ 9 ಗಂಟೆ ಸುಮಾರಿಗೆ ಮನೆಯಲ್ಲಿ ಎಲ್ಲಾ ಗಂಡಸರು ಹೊಲಕ್ಕೆ ಹೋದಾಗ ಮೃತ ಬಾಯವ್ವ ಆರೋಪಿತಳನ್ನು ಕುರಿತು ಗೊಡ್ಡಿ, ಬಂಜೆ ಅದಿ, ಟಕ್ಕಳಕಿ ಹೆಣ್ಣನ್ನು ತೆಗೆದುಕೊಳ್ಳುವದು ಬೇಡ ಅಂದರ ಅದನ್ನ ತೆಗೆದುಕೊಳ್ಳೊಕ್ಕೆ ನಿಂತೀ, ನನ್ನ ಗಂಡ ಮತ್ತು ಮಗನಿಗೆ ಒಳಗ ಹಾಕಿಕೊಂಡಿದ್ದಿ ಅವರು ನನಗೆ ಏನೂ ಹೇಳುವುದಿಲ್ಲ, ಎಲ್ಲಾ ನಿನಗ ಹೇಳುತ್ತಾರೆ ಅಂತಾ ಮೃತ ಬಾಯಕ್ಕ ಆರೋಪಿತಳಿಗೆ ಬೈದಾಡಿದ್ದರಿಂದ ಹಾಗೂ ಆರೋಪಿತಳು ಕಸವನ್ನು ಚೆಲ್ಲಲು ಮನೆ ಮುಂದೆ ಬಂದು, ತೆಂಗಿನ ಕಾಯಿಗಳನ್ನು ಆಯುತ್ತಿದ್ದಾಗ ಬಟ್ಟೆ ತೊಳೆಯುತ್ತಿದ್ದ ಮೃತ ಬಾಯಕ್ಕ ನಿನಗೆ ಮಕ್ಕಳಿಲ್ಲ, ಮರಿಯಿಲ್ಲ ಗೊಡ್ಡ ಹಡಸು ಅಂತಾ ಅವಾಚ್ಯವಾಗಿ ಬೈದಾಡಿದ್ದರಿಂದ ಆರೋಪಿತಳಿಗೆ ಸಿಟ್ಟು ಬಂದು ಅಲ್ಲಿಯೇ ಹತ್ತಿರದಲ್ಲಿ ಬಿದ್ದಿದ್ದ ಕಬ್ಬಿಣದ ರಾಡ್ ತೆಗೆದುಕೊಂಡು ಬಾಯಕ್ಕಳ ತಲೆಗೆ ಹೊಡೆದು, ಕೊಲೆ ಮಾಡಲು ಉಪಯೋಗಿಸಿದ ರಾಡ್ ಯಾರಿಗೂ ಸಿಗದಂತೆ ಬಿಸಾಕಿ ಮನೆಗೆ ಹೋಗಿ ಕುಳಿತುಕೊಂಡು ಬಾಯವ್ವಳು ಬಟ್ಟೆ ತೊಳೆಯುವಾಗ ತಾನೆ ಜೋಲಿ ಹೋಗಿ ಬಿದ್ದಿರಬಹುದು ಅಂತಾ ಸುಳ್ಳು ಹೇಳಿರುವ ಬಗ್ಗೆ ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ.

4. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ಈಗ ಎರಡು ವರ್ಷಗಳಿಂದ........... ಕೇಳಿ ಗೊತ್ತಾಗಿರುತ್ತದೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಪಿ-27 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .